(c) the extent of land in Channapatna, Maddur and Malavalli Taluks where Irrigation facility would be provided from this Scheme ?

SRI B.B. CHIMMANAKATTI (Minister of State for Major and Medium Irrigation).—

(a) Yes.

(b) The Scheme has not been stopped.

(c) The areas which will get the facilities of this Scheme is as follows:—

Channapatna Taluk	...	2,041 acres
Malavalli Taluk	...	4,528 acres
Maddur	...	1,431 acres

ಮನವಿಗಳು

ಶ್ರೀ ಡಿ.ಟಿ. ರಾಮು.—ಅಧ್ಯಕ್ಷರೆ ನನ್ನದೊಂದು ಪ್ರಶ್ನೆ ಇದೆ.

ಅಧ್ಯಕ್ಷರು.—ನಾನು ಎರಡು ಸಾರಿ ಕರೆದಿದ್ದೇನೆ. ಆವಾಗ ನೀವು ಇರಲಿಲ್ಲಾ. ಸರ್ಕಾರಿ ಹಣ ಖರ್ಚುಮಾಡಿ ಈ ಪ್ರಶ್ನೆಗೆ ಉತ್ತರ ತರಿಸಿದೆ. ಆಲ್ಲದೆ ಈ ಕೊಶ್ಚನ್ ಲಿಸ್ಟ್ ಸಹ ನಿಮಗೆ ನಿನ್ನೆಯೇ ಬಂದಿದೆ. ಹಾಗಿದ್ದರೂ ಕೂಡ ತಾವು ಸರಿಯಾದ ವೇಳೆಗೆ ಸಭೆಗೆ ಬರದೆ ಸರ್ಕಾರೀ ಹಣ ಈ ರೀತಿ ವ್ಯಯ ಮಾಡಿ ಈ ತರಹ ಮಾಡುವುದು ಸರಿಯಲ್ಲ. ನಾನು ಈ ಮೊದಲೇ ಕೊಶ್ಚನ್ ವೇಳೆ ಮುಗಿಯಿತು ಎಂದ ಮೇಲೆ ಮತ್ತೆ ತಿರುಗಿ ತೆಗೆದುಕೊಳ್ಳುವುದಿಲ್ಲ.

ಶ್ರೀ ಡಿ.ಟಿ. ರಾಮು.—ಸ್ವಾಮಿ, ನಾನು ೨ ಗಂಟೆಯೊಳಗೇನೇ ಸಭೆಗೆ ಬಂದಿದ್ದೇನೆ. ಎಲ್ಲೂ ಹೋಗಿಲ್ಲಾ.

ಅಧ್ಯಕ್ಷರು.—ನಾನು ಎರಡು ಸಾರಿ ಕರೆದಿದ್ದೇನೆ, ತಾವು ಇರಲಿಲ್ಲ. ಪ್ರಶ್ನೋತ್ತರ ಸಮಯದಲ್ಲಿ ಈ ಸಭೆಯಲ್ಲಿ ಇರುವುದು ಮುಖ್ಯ. ನಾನು ಕರೆದಾಗ ತಾವು ಇರಲಿಲ್ಲ.

PRESENTATION OF PETITION

SRI S.S. ARAKERI (Ballolli).—Sir, I beg to present the petition signed by the Chairman of Sri Sangameshwara Samsthe, Chadchan, Bijapur District, regarding construction of barrage and canal for irrigation and drinking water purpose in Chadchan.

MR. SPEAKER.—Petition is presented.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ತಮಗೂ ಮತ್ತು ಈ ಸದನಕ್ಕೂ ಗೊತ್ತಿದ್ದಂತೆ ಗೋಕಾಕ್ ಸಮಿತಿ ವರದಿ ಬಗ್ಗೆ ರಾಜ್ಯಾದ್ಯಂತ ಚಳುವಳಿ ನಡೆದಿದೆ. ಆ ಬಗ್ಗೆ ಸರ್ಕಾರ ತನ್ನ ನಿಲುವನ್ನು ಒಂದು ಸರ್ಕಾರಿ ಆಜ್ಞೆಯ ಮುಖಾಂತರ ಪ್ರಕಟ ಮಾಡಿದ ಮೇಲೆ ಪುನ: ಚಳುವಳಿ ನಡೆದು, ಆ ಚಳುವಳಿ ನಡೆಸತಕ್ಕಂಥ ಕ್ರಿಯಾಸಮಿತಿಯ ಜೊತೆಗೆ ಮತ್ತು ಸಾಹಿತಿಗಳ ಜೊತೆಗೆ ಹಾಗೂ ಬೇರೆ ಬೇರೆ ಪ್ರಮುಖರ ಜೊತೆಗೆ ಚರ್ಚೆಮಾಡಿ ಸೂಕ್ತ ಬದಲಾವಣೆ ಮಾಡತಕ್ಕ ಭರವಸೆಯನ್ನು ಕೊಟ್ಟಿದೆ. ಈ ಬಗ್ಗೆ ಸದನದ ಅಭಿಪ್ರಾಯವನ್ನೂ ಕೂಡ ತೆಗೆದುಕೊಳ್ಳತಕ್ಕ ಒಂದು ಭರವಸೆಯನ್ನು ಸರ್ಕಾರ ಕೊಟ್ಟಿದೆ. ಇವಾದ ಮೇಲೆ ಈಗಾಗಲೇ ಎರಡು ವಾರಗಳು ಕಳೆದುಹೋಗಿದೆ. ಪುನಃ ಈ ವಿಚಾರದಲ್ಲಿ ರಾಜ್ಯದ ಅನೇಕ ಭಾಗಗಳಲ್ಲಿ ಮತ್ತು ಈ ಚಳುವಳಿ ನಡೆಸತಕ್ಕ ನಾಯಕರಲ್ಲಿ ಒಂದು ಸಂಶಯದ ಭಾವನೆ ಮೂಡಿದೆ. ಆ ಕಾರಣಕ್ಕಾಗಿ ಈ ವಿಚಾರವನ್ನು ಸರ್ಕಾರ ಅನೌಪಚಾರಿಕವಾಗಿ ಚರ್ಚೆ ಮಾಡಿದಾಗ ಕ್ಯಾಬಿನೆಟ್ ಸಭೆ ಮಾಡಿ ನಿರ್ಣಯ ತೆಗೆದುಕೊಂಡು ಅದನ್ನು ನಮ್ಮ ಜೊತೆಗೆ ಚರ್ಚೆ

ಮಾಡಿ. ಈ ಸದನದ ಮುಂದೆ ಒಂದು ನಿರ್ಣಯವನ್ನು ತರತಕ್ಕ ವಿಚಾರವನ್ನುವ್ಯಕ್ತಮಾಡಿತ್ತು, ಅದು ಆದಷ್ಟು ಕೂಡಲೇ ಆಗಬೇಕು, ಸಾಧ್ಯವಾದರೆ ನಾಳೆಯೇ ಆಗಬೇಕು ಎಂದನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ವಿ ಕಕ್ಕಿಲಾಯ.—ನಾನು ನಿನ್ನೆ ಒಂದು ನೋಟೀಸನ ಕೊಟ್ಟಿದ್ದೇನೆ. ಅದನ್ನು ಆದಷ್ಟು ಶೀಘ್ರವಾಗಿ ತಾವು ಈ ಸದನದ ಮುಂದೆ ಚರ್ಚೆಗೆ ತೆಗೆದುಕೊಳ್ಳಬೇಕು. ನಿಯಮ ೩೧೨ರ ಪ್ರಕಾರ ತೆಗೆದುಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ನ್ನೆ ಸಾಯಂಕಾಲ ಪೀಣ್ಯದ ಬಳಿ ಯಲ್ಲಿ ಕಾರ್ಮಿಕರು ಕಾನೂನು ಉಲ್ಲಂಘನೆ ಮಾಡದೆ ಒಂದು ಮೆರವಣಿಗೆ ನಡೆಸಿದಾಗ, ಬಹಳ ತೀವ್ರ ವಾಗಿ ಅವರ ಮೇಲೆ ಲಾಟಿ ಚಾರ್ಜ್ ಮಾಡಿ ಮತ್ತೆ ಒಬ್ಬರು ಲಾ ಕಾಲೇಜು ಪ್ರೊಫೆಸರನ್ನು ಹೊಡೆದಂ ಅವರಿಗೆ ಆಘಾತವಾಗಿದೆ. ನಾನು ಸ್ಟೇಷನ್‌ಗೆ ಹೋಗಿ ನೋಡ್ತೀನೆ. ಮಾನ್ಯ ಅಧ್ಯಕ್ಷರು ನಾಳೆ ಗಾದರೂ ಈ ಪ್ರಶ್ನೆಯನ್ನು ಎತ್ತುವುದಕ್ಕೆ ಅವಕಾಶ ಮಾಡಿಕೊಡಬೇ.

ಅಧ್ಯಕ್ಷರು.—ನೋಟೀಸ್ ಇವತ್ತು ಬಂದಿದೆ. ನಾ ನದುಕೊಳ್ಳಬೇಕು ಎಂದು ಹೇಳು ತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯ್ಲಿ —ಮಾನ್ಯ ಅಧ್ಯಕ್ಷರೆ, ಶ್ರೀಮತಿ ಜೊಮ್ಮಾಯಿಯವರು ಗೋಕಾಕ್ ಸಮಿತಿ ವಿಚಾರದಲ್ಲಿ ಪ್ರಶ್ನೆಯನ್ನು ಎತ್ತಿದರು. ನಾಳೆ ಅದನ್ನು ರ್ಚೆಗೆ ತೆಗೆದುಕೊಳ್ಳೋಣ. ಅದನ್ನು ಸ್ಪಷ್ಟಪಡಿಸಬೇಕಿತ್ತು. ಏಕೆಂದರೆ ತಮಗೆ ತಿಳಿದ ಪ್ರಕಾರ ಮ್ಯೆ ಸದಸ್ಯರು ಮತ್ತು ವಿರೋಧಪಕ್ಷದ ಸದಸ್ಯರು ೧೪ನೇ ತಾರೀಕು ಆ ವಿಷಯವನ್ನು ಸದನದ ಮುಂ ತರಬೇಕು ಎಂದು ಆಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಮಾತನಾಡಿಕೊಂಡೆವು. ಸನ್ಮಾನ್ಯ ಮುಖ್ಯಮಂತ್ರಿಗಳೂ ಕೂಡ ೧೪ನೇ ತಾರೀಕಿಗೆ ತೆಗೆದುಕೊಳ್ಳೋಣ ಎಂದು ಹೇಳಿದರು. ಏತನ್ಮಧ್ಯೆ ಮಾನಜೊಮ್ಮಾಯಿಯವರು ಮತ್ತು ಮಾನ್ಯ ಲಕ್ಷ್ಮೀಸಾಗರ್‌ರವರು ಡೆಲ್ಲಿಯಲ್ಲಿ ನಡೆಯುವ ನ್ಯಾಷನಲ್ ಏಕತಾಪಾರ್ಟಿ ಎಕ್ಸಿಕ್ಯುಟೀವ್ ಮೀಟಿಂಗಿಗೆ ಹೊ ಗುವವರಿದ್ದರು. ಸದನದ ಎಲ್ಲಾ ಸದಸ್ಯರನ್ನು ವಿಶ್ವಸಕ್ಕೆ ತೆಗೆದುಕೊಂಡು ನಾವು ನಿರ್ಣಯ ಮಾಡಬೇಕು ಎಂಬ ಸದುದ್ದೇಶದಿಂದ ೧೪ನೇ ತಾರೀಖಿಗೆ ಚರ್ಚೆಯನ್ನು ಎತ್ತಲಿಲ್ಲ, ಮಾಡಬಲ್ಲವೇ ಹೊರತು ಇದರಲ್ಲಿ ವಿಶ್ವಾಸ ತಪ್ಪಿಸಿಕೊಳ್ಳತಕ್ಕಂಥ ಕಾರ್ಯಕ್ರಮ ಮಾಡಬೇಕು ಅಥವಾ ಸರ್ಕಾರ ಪ್ರತ್ಯೇಕವಾಗಿ ಏನಾದರೂ ಇದರಲ್ಲಿ ಹೈಡ್ ಅಂಡ್ ಸೀಕ ಮಾಡುತ್ತದೆ ಎಂದು ಸಾರ್ವಜನಿಕರಲ್ಲಿ ಅಥವಾ ಯಾರಿಗಾದರೂ ಅಭಿಪ್ರಾಯವಿದ್ದರೆ ಅದು ಖಂಡಿತವಾಗಿಯೂ ಸರಿಯಲ್ಲ. ಮಾನ್ಯ ಅಧ್ಯಕ್ಷರಿಗೆ ಗೊತ್ತಿದ್ದಂತೆ ಹಿಂದೆ ಈ ವಿಚಾರದಲ್ಲಿ ಗವರ್ನಮೆಂಟ್ ಆರ್ಡರ್ ಕೊಡುವ ಮೊದಲು ಸದನದ ಮುಂದೆ ಬಂದಾಗ ವಿರೋಧ ಪಕ್ಷದ ಸದಸ್ಯರು ಅನೇಕ ಸದಸ್ಯರು ಏನ್ನಾಗಿ ಇಲ್ಲಿ ಪ್ರತ್ಯೇಕ್ಷವಾಗಿ ಚರ್ಚೆ ಮಾಡು ವುದು ಬೇಡ, ಪ್ರತ್ಯೇಕವಾಗಿ ಸಭೆ ಕರೆದು, ಈ ವಿಚಾರದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡುವುದು ಒಳ್ಳೆಯದು ಎಂದು ಹೇಳಿದ್ದರಿಂದ ಆ ಒಂದು ಕ್ರಮವನ್ನೇ ನಾವು ಹಿಂದೆ ಕೂಡ ಅನು ಸರಿಸಿದೆವು. ನಂತರ ಸರ್ಕಾರ ಒಂದು ಆಜ್ಞೆ ಕೊಟ್ಟ ಮೆಲೆ ಸಾರ್ವಜನಿಕರಲ್ಲಿ ಮತ್ತು ಕನ್ನಡ ಕ್ರಿಯಾ ಸಮಿತಿಯವರಲ್ಲಿ ಅನೇಕರಲ್ಲಿ ಪುನಃ ಭಿನ್ನಾಭಿಪ್ರಾಯವಂದ ಕಾರಣ ರಾಜ್ಯದಲ್ಲಿರತಕ್ಕ ಸಾಹಿತಿಗಳು, ವಿದ್ಯಾ ತಜ್ಞರು, ಅನೇಕ ರೀತಿಯಾದಂಥ ಭಾಷಾಜ್ಞಾನ ಬಗ್ಗೆ ಹೆಚ್ಚು ಪರಿಣತಿಯಿರತಕ್ಕಂಥ ಮುಖ್ಯ ಪ್ರಮುಖರನ್ನು ಮಾನ್ಯ ಮುಖ್ಯ ಮಂತ್ರಿಗಳು ಕರೆಸಿ ಅವರ ಅಭಿಪ್ರಾಯವನ್ನು ಸಂಗ್ರಹಿಸಿದ್ದಾರೆ. ಆ ಸಭೆಗೆ ಕನ್ನಡ ಕ್ರಿಯಾ ಸಮಿತಿಯವರು ಮತ್ತು ಡಾಕ್ಟರ್ ರಾಜಕುಮಾರ್‌ರವರೂ ಬಂದಿದ್ದರು. ಅವರೆಲ್ಲರ ಅಭಿಪ್ರಾಯವನ್ನು ಸಂಗ್ರಹಿಸಿದ ಕೂಡಲೆ ಅವಸರದಲ್ಲಿ ತೀರ್ಮಾನ ಮಾಡುವ ಹಾಗಿಲ್ಲ, ಹಿಂದೆ ಸರ್ಕಾರ ಆಪ್ಪಣೆ ಕೊಡುವ ಮೊದಲು ಸದನವನ ವಿಶ್ವಾಸಕ್ಕೆ ತೆಗೆದುಕೊಂಡಿದೆ. ನಿನ್ನೆ ಕೂಡ ಕ್ಯಾಬಿನೆಟ್‌ನಲ್ಲಿ ಇನ್‌ಫಾರ್ಮಲ್ಲಾಗಿ ಈ ವಿಚಾರವನ್ನ ಚರ್ಚೆ ಮಾಡಿದ್ದೇವೆ. ಈ ವಿಚಾರವನ್ನು ತೀರ್ಮಾನ ಮಾಡಬೇಕು ಎಂಬ ಆತುರ ಮತ್ತು ಕಳಕಳಿ ಮ್ಮೆ ಸರ್ಕಾರದಲ್ಲಿದ್ದುದರಿಂದಲೇ ನಿನ್ನೆ ಕೂಡ ನಾವು ಚರ್ಚೆ ಮಾಡಿದೆವ್ವ. ಇವತ್ತೂ ಕೂಡ ತಮ್ಮಲ್ಲಿವಿಚಾರ ಮಾಡಿದಾಗ ೪ ಗಂಟೆಗೆ ಬಿಸಿನೆಸ್ ಆಡ್ವೈಸರಿ ಕಮಿಟಿಯನ್ನು ಕೂಡ ಕರೆದಿದ್ದಾರೆ ನಂತರ ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳವರು ವಿರೋಧಪಕ್ಷದ ನಾಯಕರು ಮತ್ತು ಸದಸ್ಯರುಗಳನ್ನು ಇತ್ತ ಮೇಲ್ಮನೆಯ ಸದಸ್ಯರುಗಳನ್ನು ಅವರ ಚೇಂಬರ್‌ನಲ್ಲಿ ಡಿಸ್ಕಸ್ ಮಾಡುವುದಕ್ಕೆ ಕರೆದಿದ್ದಾರೆ. ಎಲ್ಲರ ಅಭಿಪ್ರಾಯವನ್ನು ತಿಳಿದುಕೊಂಡು ಒಂದೇ ಸಾರಿ ನಿರ್ಣಯವನ್ನು ಮಾಡಬೇಕು ಎನ್ನುವುದೆ ಸರ್ಕಾರದ ಉದ್ದೇಶವಾಗಿದೆ. ಮತ್ತೆ ೪ ಗಂಟೆಗೆ ಬಿ.ಎ.ಸಿ. ಮೀಟಿಂಗ್ ಇದೆ, ಅದರಲ್ಲಿ ಈ ವಿಷಯವನ್ನು ನಾಳೆಯೇ ಚರ್ಚೆಗೆ ತೆಗೆದುಕೊಳ್ಳ ಬೇಕೆಂದು ನಿರ್ಣಯ ಮಾಡುವುದಾದರೆ ಮಾಡಬಹುದೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ. ರಾಮಪ್ಪ.—ಳನೇ ತಾರೀಕು ಕ್ರಿಯಾ ಸಮಿತಿಯವರ ಜೊತೆಯಲ್ಲಿ ಮಾತುಕತೆ ನಡೆಸಿದಾಗ ತಾವು ಎಲ್ಲ ಮೊಕದ್ದಮೆಗಳನ್ನು ಹಾಕಿದ್ದೀರೋ ಅವುಗಳನ್ನೆಲ್ಲಾ ವಾಪಸ್ಸು ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಭರವಸೆಯನ್ನು ಮಾನ್ಯ ಪಂತ್ರಿಗಳವರು ಕೊಟ್ಟಿದ್ದರು. ಆದರೆ ಇದರ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಂಡಿ. ಇದರಿಂದ ತಾವು ಕೊಟ್ಟಂಥ ವಚನವನ್ನು ಪಾಲಿಸಿಲ್ಲ ಎನ್ನುವುದು ಗೊತ್ತಾಗುತ್ತಿದೆ. ಇದರಿಂ ಬಹಳ ಗೊಂದಲವನ್ನು ಉಂಟುಮಾಡಿದೆ, ನಿಜವಾಗಿಯೂ ನಿಮಗೆ ಕಳಕಳಿ ಇದ್ದರೆ. ಪ್ರಾಮಾಣಿತನ ಇದ್ದಿದ್ದರೆ ಇದನ್ನು ಏತಕ್ಕೆ ಪರಿಹಾರ ಮಾಡಬಾರದಾಗಿತ್ತು ? ಹಾಗಿಲ್ಲದೇ ಇದ್ದರೆ ಏತಕ್ಕೆ ಭರವಸೆಯನ್ನು ಕೊಟ್ಟಿರಿ ? ಆವತ್ತಿನ ದಿವಸ ಆ ಸಭೆಗೆ ಶ್ರೀ ಪಾಟೀಲ್ ಪುಟ್ಟಪ್ಪರವರು ಮತ್ತು ಡಾ. ಎಜಕುಮಾರ್‌ರವರು ಬಂದಂಥ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳವರು ಈ ಮೊಕದ್ದಮೆಗಳನ್ನೆಲ್ಲಾ ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇನ್ನಾನ್ಯ ಸದಸ್ಯರು ಆವತ್ತಿನ ದಿವಸದ ಸಭೆಯಲ್ಲಿ ಭಾಗವಹಿಸಿರಲಿಲ್ಲ. ಅವರು ಏನು ಹೇಳಿದ್ದೆವು ಎಂದರೆ ಯಾರು ಯಾರು ಕಸ್ಟಡಿಯಲ್ಲಿದ್ದಾರೆ ಅವರನ್ನು ತಕ್ಷಣವೇ ಬಿಡುಗಡೆ ಮಾಡುವುದಾಗಿ ತಿಳಿಸಿದ್ದರು ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಏಕೆಂದರೆ ಮೊಕದ್ದಮೆಗಳನ್ನು ಹಾಗೆ ಕೂಡಲೇ ವಾಪಸ್ಸು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಕಾನೂನ ಪ್ರಶ್ನೆ ಇರುವುದರಿಂದ ಅದರ ಬಗ್ಗೆ ಕೆಲವೊಂದು ಪ್ರೋಸಸ್ ಆಗಬೇಕಾಗಿರುತ್ತದೆ. ಮೊಕದ್ದಮೆಗಳನ್ನು ಸರ್ಕಾರ ಹಿಂದಕ್ಕೆ ತೆಗೆದುಕೊಳ್ಳುತ್ತದೆಂದು ಹೇಳಿದ ಕೂಡಲೇ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಅದರ ಬಗ್ಗೆ ಕೋರ್ಟಿನಲ್ಲಿ ತೀರ್ಮಾನ ಮಾಡಬೇಕಾಗಿರುತ್ತದೆ, ಅದಕ್ಕೆ ಕೆಲವು ಪ್ರೊಸೀಜರ್‌ಗಳಿರುತ್ತವೆ. ತಾವು ಲಾಯರ್ ಆಗಿದ್ದರೆ ಈ ಪ್ರಶ್ನೆಯನ್ನು ಕೇಳುತ್ತಿರಲಿಲ್ಲ ಆದುದರಿಂದ ಈ ಎಲ್ಲಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಸರ್ಕಾರಕ್ಕೆ ಪ್ರಾಮಾಣಿಕತೆ ಇದೆ, ಇದರಿಂದ ಈ ವಿಷಯವನ್ನು ರಾಜಕೀಯವಾಗಿ ಉಪಯೋಗ ಮಾಡಿಕೊಳ್ಳುವ ಅಪ್ರಮಾಣಿಕತೆಯನ್ನು ಯಾರೂ ತೋರಿಸಬಾರದೆಂದುನ್ನ ವಿನಂತಿ.

ಶ್ರೀ ಪಿ. ರಾಂದೇವ್.—ಅಪ್ರಮಾಣಿಕರು ಯಾರು ಎಂಬುದು ತಮಗೇ ಗೊತ್ತಿದೆ. ಗೋಕಾಕ್ ಸಮಿತಿಯ ವರದಿಯ ಬಗ್ಗೆ ಈ ಸಭೆಯಲ್ಲಿ ಒಪ್ಪಿಕೊಂಡಿದ್ದೀರಿ, ಕೊಡಗು ಸಾಹಿತ್ಯ ಸಮ್ಮೇಳನದಲ್ಲಿ ಒಪ್ಪಿಕೊಂಡಿದ್ದೀರಿ, ಆನಂತರ ಇಲ್ಲಿ ರಾಜ್ಯಪಾಲರ ಭಾಷಣದಲ್ಲಿ ಸಹ ಒಪ್ಪಿಕೊಂಡು ನೀವು ಈ ರೀತಿ ಮಾಡುತ್ತಿರುವುದರಿಂದ ಯಾರು ಅಪ್ರಾಮಾಣಿಕತನ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ಮತ್ತೆ ಆವತ್ತಿನ ದಿವಸ ಸಾಕಷ್ಟು ಸಾಹಿತಿಗಳು ಕೇಟ್‌ಗೆ ಅಲೆಯಬೇಕೆಂದು ನಿಮ್ಮ ಉದ್ದೇಶವಿದೆಯೋ ?...

SRI M. VEERAPPA MOILY—After all, we have released all those persons. We have kept up or commitment. ನಾವು ಹೇಳಿದ ಕೂಡಲೇ ಅಪ್ಪಣೆ ಮಾಡಿದ ಕೂಡಲೇ ಆ ಮೊಕದ್ದಮೆಗಳನ್ನುವಾಪಸ್ಸು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೆಲ್ಲಾ ಕೆಲವು ಪ್ರೊಸೀಜರ್‌ಗಳು ಇವೆ. ಶ್ರೀ ರಾಂದಾರವರದೇ ಒಂದು ರಾಜ್ಯವಿದ್ದರೆ ಅಲ್ಲಿ ನೀವು ಆ ರೀತಿ ಯಾಗಿ ಮಾಡಬಹುದಷ್ಟೇ.

CALLING ATTENTION TO A MATTER OF URGENT PUBLIC IMPORTANCE

re: Non-release of funds to repair tank bunds in Kolar District.

SRI M. ABDUL LATHEEF.—ir, I call the attention of the Hon'ble Minister for Revenue to the seious situation that has arisen due to non-release of funds to repaitank bunds in Kolar District.

SRI MALLIKARJUNA M. KARGE (Minister for Revenue).—Sir, I wish to make the following satement: